# 6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2022

## ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ – 2022

## ಡಾ. ಎಸ್. ನಾಗೇಂದ್ರ ರವರ
## ಪ್ರಶಸ್ತಿ ಪತ್ರ

ಡಾ. ಎಸ್. ನಾಗೇಂದ್ರ ಅವರು ದಿ. ಡಾ. ಸೋಮಶೇಖರಪ್ಪ ಮತ್ತು ಶ್ರೀಮತಿ ವಿಮಲ ದಂಪತಿಗಳಿಗೆ ಜುಲೈ 1956 ರಲ್ಲಿ ಕರ್ನಾಟಕದ ಚಿನ್ನದ ಜಿಲ್ಲೆ ಕೋಲಾರದಲ್ಲಿ ಜನಿಸಿದರು. ವೈದ್ಯರಾದ ತಂದೆ, ಹಳ್ಳಿಯ ಬಡ ರೋಗಿಗಳ ಸಮಸ್ಯೆಗಳಿಗೆ ಸ್ಪಂದಿಸಿ, ಚಿಕಿತ್ಸೆ ನೀಡಿ, ಶುಶ್ರೂಷೆ ಮಾಡುತ್ತಿದ್ದುದ್ದನ್ನು ಕಣ್ಣಾರೆ ಕಂಡ ನಾಗೇಂದ್ರ 'ಸೇವೆ' ಎಂಬುದರ ನಿಜವಾದ ಅರ್ಥವನ್ನು ಬಾಲ್ಯದಿಂದಲೇ ಅರ್ಥಮಾಡಿಕೊಂಡು, ಮೈಗೂಡಿಸಿಕೊಂಡರು.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಆರಂಭಿಕ ಶಿಕ್ಷಣವನ್ನು ಪಡೆದು, ಕೋಲಾರದಲ್ಲಿ ಪದವೀಧರರಾಗಿ, ಮೈಸೂರು ವಿಶ್ವವಿದ್ಯಾಲಯದಿಂದ "ಬಿಸಿನೆಸ್ ಅಡ್‌ಮಿನಿಸ್ಟ್ರೇಶನ್"ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ವೃತ್ತಿಗಾಗಿ ಉದ್ಯೋಗ, ಪ್ರವೃತ್ತಿಯಾಗಿ ಅಧ್ಯಾಪನಾ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬಿಡುವಿಲ್ಲದೆ ದುಡಿಯುತ್ತಿದ್ದರೂ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಸಮಾನ ಆಸಕ್ತಿ ಹೊಂದಿದ್ದು "Paradigm Shift in Trade Unions" ಎಂಬ ವಿಷಯ ಸಂಶೋಧನಾ ಪ್ರಬಂಧಕ್ಕೆ PhD ಪದವಿ ಪಡೆದಿದ್ದಾರೆ.

ನಾಗೇಂದ್ರ ಹಲವಾರು ಸಾರ್ವಜನಿಕ ಹಾಗೂ ಖಾಸಗಿ ಉದ್ಯಮಗಳಲ್ಲಿ ಸುಮಾರು ೩ ದಶಕಗಳಿಂದ ಖ್ಯಾತನಾಮರಾಗಿದ್ದಾರೆ. M/s. N.G.E.F. , M/s. Mysore Lamps ಮತ್ತು M/s. Himatsingka Seide ಇವು ಕೆಲವು ಇವರು ಕಾರ್ಯನಿರ್ವಹಿಸಿದ ಸಂಸ್ಥೆಗಳು. ಕಾರ್ಯತತ್ಪರತೆ, ಕಾರ್ಯನಿಷ್ಠೆ, ಸಹೋದ್ಯೋಗಿಗಳೊಡನೆ ಸಹಕಾರ ಮನೋಭಾವ, ಉತ್ಕರ್ಷ ಮಾನವೀಯ ಗುಣ ನಾಗೇಂದ್ರ ಅವರ ಸಾಧನೆಯ ಸೋಪಾನಗಳು.

ವೃತ್ತಿಯಲ್ಲಿ ದೊರೆತ ಎಲ್ಲ ಸಮೃದ್ಧ ಅನುಭವ ಅವರ ಮೆಚ್ಚಿನ ಪ್ರವೃತ್ತಿ ಅಧ್ಯಾಪನದಲ್ಲಿ ಫನೀಭೂತವಾಗಿದೆ. ಅವರ ಮಾತುಗಳಲ್ಲೇ ಹೇಳುವುದಾದರೆ "Teaching & Training" "ಅಧ್ಯಾಪನ ಮತ್ತು ತರಬೇತಿಯಲ್ಲಿ" ಸಾಕಾರಗೊಂಡಿದೆ. ಸಹೋದ್ಯೋಗಿಗಳಿಂದ ಹಾಗೂ ವಿದ್ಯಾರ್ಥಿ ಸಮುದಾಯದಿಂದ ನಲ್ಮೆಯ ನೆಚ್ಚಿನ "ಪ್ರೊಫೆಸರ್" ಎಂದೇ ಸಂಬೋಧಿತರಾದ ನಾಗೇಂದ್ರ ಈಗ ಪೂರ್ಣಾವಧಿ ಅಧ್ಯಾಪನಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ವಿದ್ಯಾ ಸಂಸ್ಥೆಗಳನ್ನು ಉನ್ನತ ಶಿಕ್ಷಣ ಕೇಂದ್ರಗಳನ್ನಾಗಿ ಮಾಡುವ ಅವಿರತ ಪ್ರಯತ್ನ ಇವರದಾಗಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಶಿಕ್ಷಣ ಮಂಡಳಿಯ ಮ್ಯಾನೇಜ್‌ಮೆಂಟ್ ವಿಭಾಗದ ಚೇರ್‌ಮನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಮ್ಯಾನೇಜ್‌ಮೆಂಟ್ ವಿಭಾಗದ 'ಡೀನ್' ಕೆಲಸ ನಿರ್ವಹಿಸುತ್ತಿದ್ದಾರೆ.

ಮುಂದಾಳತ್ವ ಮತ್ತು ತಂಡದ ಸಂಘಟನೆಗಳಲ್ಲಿ ಪರಿಣತಿ ಹಾಗೂ ಚಾತುರ್ಯ ಇವು ನಾಗೇಂದ್ರ ಅವರ ವೃತ್ತಿ ಯಾತ್ರೆಯುದ್ದಕ್ಕೂ ಹರಿದು ಬಂದ ವಿಶಿಷ್ಠ ಗುಣ. ಈ ವೈಯಕ್ತಿಕ ವೈಶಿಷ್ಟ್ಯದಿಂದ ಹಲವಾರು ಪ್ರಶಸ್ತಿಯ ಗರಿಗಳು ಇವರ ಮುಡಿಯನ್ನಲಂಕರಿಸಿವೆ. ಇವುಗಳಲ್ಲಿ ಬಹು ಮುಖ್ಯವಾದುದು "National Institute of Personnel Management" ಸಂಸ್ಥೆಯ ಜೀವಮಾನ ಸಾಧನೆಯ ಪ್ರಶಸ್ತಿ, "Indian Society for Training & Development" ಬೆಂಗಳೂರು ವಿಭಾಗದ ಚೇರ್‌ಮನ್ ಹುದ್ದೆ, AIMA ಸೇರಿದಂತೆ ಹಲವಾರು ಔದ್ಯೋಗಿಕ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆ.

ಡಾ. ಎಸ್. ನಾಗೇಂದ್ರ ರವರು ಮಾನವ ಸಂಪನ್ಮೂಲ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಗಣನೀಯ ಸೇವೆ ಮತ್ತು ಕೊಡುಗೆಗಳನ್ನು ಗುರುತಿಸಿ, ಆರನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2022 ರ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ **"ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ – 2022"** ನೀಡುತ್ತಾ ಸನ್ಮಾನಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ಭಗವಂತ ಇವರಿಗೆ ಮತ್ತು ಇವರ ಕುಟುಂಬ ಸದಸ್ಯರಿಗೆ ಆರೋಗ್ಯ ಸುಖ–ಶಾಂತಿ ನೆಮ್ಮದಿ ಸಮೃದ್ಧಿಯನ್ನು ದಯಪಾಲಿಸಲೆಂದು ಎಲ್ಲ ಮಾನವ ಸಂಪನ್ಮೂಲ ವೃತ್ತಿನಿರತರ ಪರವಾಗಿ ಆಶಿಸುತ್ತೇವೆ.

**ಎಸ್.ಎನ್. ಮೂರ್ತಿ**
ಹಿರಿಯ ವಕೀಲರು,
ಕರ್ನಾಟಕ ಉಚ್ಚನ್ಯಾಯಾಲಯ

**ರಮೇಶ ಎಂ.ಎಚ್.**
ಕಾರ್ಯದರ್ಶಿ,
ನಿರಾತಂಕ ಟ್ರಸ್ಟ್